## 28. ಸ॥ಹಿ॥ಪ್ರಾ॥ ಶಾಲೆ, ಅರೇಹಳ್ಳಿ

ಶಾಲೆಯು 1953ರಲ್ಲಿ ಆರಂಭಗೊಂಡಿದ್ದು, ಉತ್ತಮ ಪರಿಸರವನ್ನು ಹೊಂದಿದೆ. ಶಾಲೆಗೆ ಎಸ್.ಡಿ.ಎಂ.ಸಿ, ಗ್ರಾಮ ಪಂಚಾಯ್ತಿ ಮತ್ತು ಊರಿನವರ ಸಹಕಾರವಿದೆ. ಪ್ರಸ್ತುತ 1 ರಿಂದ 7 ನೇ ತರಗತಿಯವರಿಗೆ 41 ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಿದ್ದಾರೆ. ಪ್ರಸ್ತುತ ಪರಿಸ್ಥಿತಿಯಲ್ಲಿ ಖಾಸಗಿ ಶಾಲೆಗಳ ಹಾವಳಿಯಿಂದ ಸರ್ಕಾರಿ ಶಾಲೆಗಳು ಬಡವಾಗುತ್ತಿರುವ ಬಿಸಿ, ನಮ್ಮ ಶಾಲೆಗೂ ತಾಗಿದೆ.

ಶಾಲೆಯ ದಾಖಲಾತಿ ಮತ್ತು ಹಾಜರಾತಿ ಮತ್ತು ಕಲಿಕಾ ಪಟ್ಟವನ್ನು ಸುಧಾರಿಸುವ ಸಲುವಾಗಿ ಅನೇಕ ಕ್ರಮಗಳನ್ನು ಕೈಗೊಳ್ಳಲಾಗಿದೆ.

- ನಲಿ-ಕಲಿ ತರಗತಿಗಳನ್ನು ಪರಿಣಾಮಕಾರಿಯಾಗಿಸಲು ನಲಿ-ಕಲಿ ತರಗತಿಗಳನ್ನು ಅಂದವಾಗಿಡಲು ಪ್ರಯತ್ನಿಸಲಾಗಿದೆ. ಮಕ್ಕಳಿಗೆ ಪ್ರತ್ಯೇಕ ಆಸನ ವ್ಯವಸ್ಥೆ ಮಾಡಲಾಗಿದೆ.
- ಕಾರ್ಡುಗಳನ್ನು ವಿದ್ಯಾರ್ಥಿಗಳಿಗೆ ಸುಲಭವಾಗಿ ಎಟುಕುವಂತೆ ಜೋಡಿಸಲಾಗಿದೆ.
- ತರಗತಿಗಳನ್ನು ನಲಿ-ಕಲಿ ಮಾದರಿಯಲ್ಲಿ ಪರಿಣಾಮಕಾರಿಯಾಗಿ ನಡೆಸಲಾಗುತ್ತಿದೆ.
- ಪ್ರತೀ ಶನಿವಾರಗಳಂದು ಒಂದು ಅವಧಿಯಲ್ಲಿ ಮಕ್ಕಳಿಗೆ ಓದು ಮತ್ತು ಬರಹ ಸ್ಪರ್ಧೆ ಏರ್ಪಡಿಸಿ, ಬಹುಮಾನ ನೀಡಿ ಪ್ರೋತ್ಸಾಹಿಸಲಾಗುತ್ತಿದೆ. ಇದರಿಂದ ಸಕಾರಾತ್ಮಕ ಪ್ರತಿಕ್ರಿಯೆ ಮಕ್ಕಳಿಂದ ದೊರೆತಿದೆ.
- ವಿದ್ಯಾರ್ಥಿಗಳಿಗೆ ಕಲಿಕಾಂಶಗಳನ್ನು ಪರಿಣಾಮಕಾರಿಯಾಗಿ ತಲುಪಿಸುವ ಸಲುವಾಗಿ, ಪ್ರೋಜೆಕ್ಟರ್ ವ್ಯವಸ್ಥೆ ಮಾಡಲಾಗಿದೆ. ಇದರಿಂದ ಗಣಿತ, ಕನ್ನಡ, ಇಂಗ್ಲೀಷ್ ವಿಜ್ಞಾನ, ಸಾಮಾನ್ಯ ವಿಜ್ಞಾನದ ಕ್ಲಿಷ್ಟ ಪರಿಕಲ್ಪನೆಗಳನ್ನು ಮಕ್ಕಳಿಗೆ ಸರಳವಾಗಿ ಮನದಟ್ಟು ಮಾಡಿಸಲು ಸಹಾಯವಾಗುತ್ತಿದೆ.
- ಭಾಷಾ ವಿಷಯಗಳ ಪದ್ಯಗಳನ್ನು ಪ್ರೊಜೆಕ್ಟರ್ ಮೂಲಕ ವಿದ್ಯಾರ್ಥಿಗಳಿಗೆ ಪರಿಣಾಮಕಾರಿಯಾಗಿ ತಲುಪಿಸಲಾಗುತ್ತಿದೆ.
- ವಿದ್ಯಾರ್ಥಿಗಳಿಗೆ ತರಗತಿಯ ಏಕತಾನತೆಯನ್ನು ತಪ್ಪಿಸುವ ಸಲುವಾಗಿ ಕುಟೀರವನ್ನು ಪೋಷಕರ ನೆರವಿನಿಂದ ನಿರ್ಮಿಸಲಾಗಿದೆ. ಇಲ್ಲಿ ವಿದ್ಯಾರ್ಥಿಗಳು ಕುಳಿತು ಸಂತೋಷದಾಯಕವಾಗಿ ಸ್ವಕಲಿಕೆಯಲ್ಲಿ ತೊಡಗುತ್ತಾರೆ ಮತ್ತು ಆಸಕ್ತಿಯಿಂದ ಕಲಿಯುತ್ತಿದ್ದಾರೆ.
- ಗ್ರಂಥಾಲಯವನ್ನು ವಿದ್ಯಾರ್ಥಿಗಳಿಗೆ ಉಪಯೋಗವಾಗುವಂತೆ ಸುವ್ಯವಸ್ಥಿಗೊಳಿಸಲಾಗಿದ್ದು, ವಿರಾಮದ ವೇಳೆಯಲ್ಲಿ ವಿದ್ಯಾರ್ಥಿಗಳು ಪುಸ್ತಕಗಳನ್ನು ಓದಿ ದಾಖಲಿಸುವರು. ತೆರೆದ ಗ್ರಂಥಾಲಯವನ್ನೂ ಇಡಲಾಗಿದೆ
- ಸುಂದರವಾದ ಹೂದೋಟವನ್ನು ನಿರ್ಮಿಸಿ ಶಾಲಾ ವಾತಾವರಣವನ್ನು ಆಕರ್ಷಕಗೊಳಿಸಲು ಪ್ರಯತ್ನಿಸಲಾಗಿದೆ. ಇದರ ನಿರ್ವಹಣೆಯನ್ನು ವಿದ್ಯಾರ್ಥಿಗಳೇ ಮಾಡುತ್ತಿದ್ದಾರೆ.
- ಪ್ರತಿ ಶುಕ್ರವಾರ ವಿದ್ಯಾರ್ಥಿಗಳಿಗೆ ವಿವಿಧ ಸಹಪಠ್ಯ ಚಟುವಟಿಕೆಗಳನ್ನು ಹಮ್ಮಿಕೊಂಡು ಪ್ರೋತ್ಸಾಹಿಸಲಾಗುತ್ತಿದೆ.
- ದಾನಿಗಳಿಂದ 10,000 ರೂ. ಹಣವನ್ನು ಪಡೆದು ಎಫ್.ಡಿ ಇಟ್ಟಿದ್ದು, ಬರುವ ಬಡ್ಡಿ ಹಣವನ್ನು 7ನೇ ತರಗತಿಯಲ್ಲಿ ಅತಿ ಹೆಚ್ಚು ಅಂಕ ಪಡೆದ ಇಬ್ಬರು ವಿದ್ಯಾರ್ಥಿಗಳಿಗೆ ನಗದು ಬಹುಮಾನ ನೀಡಲಾಗುತ್ತಿದೆ.
- ಉತ್ತಮ ಶಾಲಾ ವಾತಾವರಣ ನಿರ್ಮಾಣ ಮಾಡಲಾಗಿದೆ.
- ನಾಯಕತ್ವ ಬೆಳವಣಿಗೆ ಮಾಡಲು ಜವಾಬ್ದಾರಿ ಹಂಚಿ ಮಕ್ಕಳೇ ನಿರ್ವಹಣೆ ಮಾಡಲು ವ್ಯವಸ್ಥೆ ಮಾಡಲಾಗಿದೆ.








